# ಅವತಾರ



**ಸ್ವಾಮಿ ಶಾಂತಿವ್ರತಾನಂದ**

ಜನರ ಉದ್ಧಾರಕ್ಕಾಗಿ ಭಗವಂತನೇ ಮನುಷ್ಯನಾಗಿ ಜನ್ಮವೆತ್ತಿ ಬರುವುದನ್ನು 'ಅವತಾರ' ಎಂದು ಕರೆಯುತ್ತೇವೆ. ನಮ್ಮ ದೇಶದ ಧಾರ್ಮಿಕ, ಆಧ್ಯಾತ್ಮಿಕ ಇತಿಹಾಸದಲ್ಲಿ ಅವತಾರಪುರುಷರ ಪ್ರಭಾವ ಸಮಾಜದ ಮೇಲೆ ಅತ್ಯಂತ ದಟ್ಟವಾಗಿ ಉಂಟಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅವತಾರ ತತ್ತ್ವದ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ಅವತಾರ ಎಂಬ ಪದವು 'ಅವ' ಹಾಗೂ 'ತರ್' ಎಂಬ ಪದಗಳಿಂದ ಹುಟ್ಟಿದೆ. 'ಅವ' ಎಂದರೆ ಕೆಳಕ್ಕೆ ಮತ್ತು 'ತರ' ಎಂದರೆ ಇಳಿದುಬರುವುದು. ಒಟ್ಟಿನಲ್ಲಿ 'ಅವತಾರ' ಎಂದರೆ 'ಭಗವಂತ ಧರೆಗೆ ಇಳಿದು ಬರುವುದು' ಎನ್ನಬಹುದು. ''**ಅಪ್ರಪಂಚಾತ್ ಪ್ರಪಂಚೇ ಅವತರಣಂ ಅವತಾರಃ**! ಜಗತ್ತನ್ನು ಆವರಿಸಿರುವ ಮಾಯೆಯ ಆಚೆಗಿರುವ ದಿವ್ಯಲೋಕದಿಂದ ಈ ಜಗತ್ತಿಗೆ ಇಳಿದು ಬರುವುದಕ್ಕೆ ಅವತರಣ ಎನ್ನುತ್ತಾರೆ.'' ಒಟ್ಟಿನಲ್ಲಿ, ದೇವರು ಈ ಜಗತ್ತಿನಲ್ಲಿ ಹುಟ್ಟಿ ಬರುವುದಕ್ಕೆ ಅವತರಣ ಎನ್ನಬಹುದು. ಮನುಷ್ಯ ಭಗವಂತನೆಡೆಗೆ ಹೋಗುವಂತೆ ಭಗವಂತನೂ ಮನುಷ್ಯನೆಡೆಗೆ ಬರುತ್ತಾನೆ. ಅವನು, ಮನುಷ್ಯನ ಮನಸ್ಸು ಗ್ರಹಿಸಬಲ್ಲಂತಹ, ಮನುಷ್ಯನ ಮನಸ್ಸನ್ನು ಉದ್ದೀಪನಗೊಳಿಸುವಂತಹ ರೂಪಗಳಲ್ಲಿ ಬರುತ್ತಾನೆ. ಮನುಷ್ಯನಿಗೆ ದೇವರ ಸ್ವರೂಪವನ್ನು ಅರ್ಥಮಾಡಿಸುವುದು ಮತ್ತು ಅವನನ್ನು ದೇವರೆಡೆಗೆ ಸೆಳೆಯುವುದು ಅವತಾರದ ಉದ್ದೇಶ ಎನ್ನಬಹುದು. ಯಾರು ಅಸಂಖ್ಯ ಹೃದಯಗಳಲ್ಲಿ ಭಕ್ತಿಯ ಭಾವವನ್ನು ಮೂಡಿಸುತ್ತಾನೋ ಅಂಥವನನ್ನು ಅವತಾರ ಎನ್ನಬಹುದು. ಅವತಾರ ಎಂದರೆ 'ಆವಿರ್ಭಾವ' ಅಥವಾ 'ಹುಟ್ಟುವುದು' ಅಥವಾ 'ಪ್ರಕಟವಾಗುವುದು' ಎಂಬ ಅರ್ಥವೂ ಇದೆ.

ವೇದಾಂತದ ಭಕ್ತಿಪರವಾದ ಸಿದ್ಧಾಂತಗಳಿಂದ ಅವತಾರವಾದವು ವಿಕಾಸಗೊಂಡಿದೆ. ಇವುಗಳ ಪ್ರಕಾರ ಪರಬ್ರಹ್ಮ, ಸಗುಣ ಮತ್ತು ಅದಕ್ಕೊಂದು ಆಕಾರವಿದೆ; ಭಕ್ತಿ ಆ ಪರಬ್ರಹ್ಮನನ್ನು ತಲುಪಲು ಇರುವ ಅತ್ಯಂತ ಸುಲಭ ಮಾರ್ಗ. ಈ ವಾದಗಳ ಪ್ರಕಾರ ಇಷ್ಟದೇವತೆಯ ಕುರಿತಾದ ಭಕ್ತಿಯೇ ಮುಕ್ತಿಗೆ ಪರಮ ಶ್ರೇಷ್ಠವಾದ ಮಾರ್ಗ. ಅದ್ವೈತವಾದವು, ಬ್ರಹ್ಮವು ನಿರಾಕಾರ ಮತ್ತು ಅದನ್ನು ತಲುಪಲು ಜ್ಞಾನ ಮಾರ್ಗವೊಂದೇ ಉಪಾಯ ಎನ್ನುತ್ತದೆ. ಸಾಮಾನ್ಯರಿಗೆ ಈ ಜ್ಞಾನಮಾರ್ಗವನ್ನು ಅರ್ಥಮಾಡಿಕೊಳ್ಳಲು ಕಷ್ಟ. ಅವರಿಗೆ ಒಂದು ಮೂರ್ತರೂಪ ಬೇಕು, ಅವರು ಅದಕ್ಕೆ ಶರಣಾಗಬೇಕು, ಅದನ್ನು ಪ್ರೀತಿಸಬೇಕು, ಅದರೊಂದಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳಬೇಕು, ಅದನ್ನು ಆರಾಧಿಸಬೇಕು ಮತ್ತು ಅದರಲ್ಲಿ ತಮ್ಮ ಶ್ರದ್ಧೆಯನ್ನು ಅರ್ಪಿಸಬೇಕು. ಸಗುಣ ಬ್ರಹ್ಮವಾದಿಗಳು ಅಥವಾ ಬ್ರಹ್ಮವು ಸಾಕಾರ ಎಂದು ನಂಬುವವರು ದೇವರು ಅವತರಿಸುತ್ತಾನೆ ಎಂದು ನಂಬುತ್ತಾರೆ.

ಅವತಾರ ಎಂದರೆ ಸಾಕಾರ-ನಿರಾಕಾರ, ದೇವರ- ಮಾನವನ ಸಂಯೋಜನೆ ಎನ್ನಬಹುದೇನೋ! ಅವತಾರವೆಂದರೆ ಪುರುಷನೂ ಹೌದು ಪ್ರಕೃತಿಯೂ ಹೌದು. ಅವತಾರ, 'ಲೈಟ್‌ಹೌಸ್'ನಂತೆ ಪ್ರಪಂಚದ ಜನರಿಗೆ ದಾರಿದೀಪವಾದರೂ ಅದರಂತೆ ನಿಶ್ಚಲನಲ್ಲ. ಶ್ರೀರಾಮಕೃಷ್ಣರ ಮಾತುಗಳನ್ನೇ ಆಧರಿಸಿ ಹೇಳುವು

ದಾದರೆ ಅವನೊಂದು ಕ್ರಿಯಾತ್ಮಕ ಶಕ್ತಿ, ಭಾರಿ ಗಾತ್ರದ ಹಡಗು. ಸಾವಿರಾರು ಮಂದಿಯನ್ನು ಹೊತ್ತೊಯ್ದು ಭವಸಾಗರವನ್ನು ದಾಟಿಸಬಲ್ಲನು. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ:

**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥** *(೪.೭)*

'ಹೇ ಅರ್ಜುನ, ಧರ್ಮವು ನಷ್ಟವಾಗಿ ಅಧರ್ಮವು ತಾಂಡವ ವಾಡುತ್ತಿದ್ದಾಗ ಧರ್ಮವನ್ನು ರಕ್ಷಿಸಲು ನಾನು ಜನ್ಮವನ್ನು ಎತ್ತುತ್ತೇನೆ.' ಆದರೆ ಸ್ವಾರಸ್ಯವೆಂದರೆ, ಶ್ರೀ ಅರವಿಂದರ ಪ್ರಕಾರ ಧರ್ಮವನ್ನು ಎತ್ತಿ ಹಿಡಿಯುವುದೊಂದೇ ಅವತಾರದ ಪರಮೋದ್ದೇಶವಾಗಿರುವುದಿಲ್ಲ. ಏಕೆಂದರೆ ಆ ಕೆಲಸವನ್ನು ಭಗವಂತನು ಭೂಮಿಗೆ ಇಳಿದು ಬರುವ ಕಷ್ಟ ತೆಗೆದುಕೊಳ್ಳದೆಯೂ ಮಾಡಬಹುದು. ಭಗವಂತನು ಮಾನವನಾಗಿ ಇಳಿದು ಬರುವುದು ಮಾನವನನ್ನು ಭಗವಂತನನ್ನಾಗಿಸಿ ಮೇಲೇರಿಸಲು. ಅವತಾರಿಯು ಸ್ವಂತ ಉದಾಹರಣೆಯಿಂದ ಪರಿಪೂರ್ಣನಾದ ಮಾನವ ಯಾವ ರೀತಿ ಇರುತ್ತಾನೆ ಎಂಬುದನ್ನು ತೋರಿಸುತ್ತಾನೆ.

ಭಗವಂತ ಮಾನವನಿಗೆ ಒಂದು ಸೊಗಸಾದ ಅಚ್ಚನ್ನು ತಯಾರಿಸಿಕೊಡುತ್ತಾನೆ. ''ನಿನ್ನ ಬದುಕು, ನಿನ್ನ ಬುದ್ಧಿ-ಮನಸ್ಸು, ಇತ್ಯಾದಿಗಳನ್ನು ಈ ಅಚ್ಚಿನಲ್ಲಿ ಎರಕಹೊಯ್ದುಬಿಡು. ನೀನು ಅವನಂತೆ ಆಗಿಬಿಡುತ್ತೀಯೆ'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ''ಅಚ್ಚು ಸಿದ್ಧವಾಗಿದೆ, ನಿನ್ನ ಮನಸ್ಸನ್ನು ಅದರಲ್ಲಿ ಎರಕ ಹೊಯ್ದುಬಿಡು.''

## ಅವತಾರ ಪರಿಕಲ್ಪನೆಯ ಆರಂಭ

ಅವತಾರದ ಕಲ್ಪನೆಯು ಮೊದಲಿಗೆ ಕಂಡುಬರುವುದು ಋಗ್ವೇದದಲ್ಲಿ ಎನ್ನಬಹುದು. ಶ್ರೀ ಪಾಂಡುರಂಗ ವಾಮನ ಕಾಣೆಯವರ ಪ್ರಕಾರ, ನಿರುಕ್ತವು ನರರೂಪಿ ಮತ್ತು ನರರೂಪಿ-ಅಲ್ಲದ ದೇವರುಗಳ ಬಗ್ಗೆ ಹೇಳುತ್ತದೆ. ವೇದಮಂತ್ರಗಳಲ್ಲಿ ಬರುವ ಅನೇಕ ಚಾರಿತ್ರಿಕ ಋಷಿಗಳನ್ನು ಪುರಾಣಗಳು ಅವತಾರಗಳು ಎಂದು ಉಲ್ಲೇಖಿಸಿವೆ. 'ಪುರುಷಸೂಕ್ತ'ದಲ್ಲಿ ಬರುವ ನಾರಾಯಣ ಋಷಿ, ಋಗ್ವೇದದ ಋಷಿ ನಾರದರು, ಇವರಿಬ್ಬರನ್ನೂ ಭಾಗವತವು ಅವತಾರಗಳೆಂದು ಹೇಳುತ್ತದೆ (೮.೧೩). ಋಗ್ವೇದವು ಒಂದೆಡೆ ಕೃಷ್ಣನನ್ನು ಮಹರ್ಷಿ ಮತ್ತು ಸುಧಾರಕ ಎಂದು ಉಲ್ಲೇಖಿಸುತ್ತದೆ (೮.೯೬; ೧೩-೧೫); ಮತ್ತೊಂದೆಡೆ ಋಗ್ವೇದವನ್ನು ರಚಿಸಿದ ಋಷಿ ಎನ್ನುತ್ತದೆ (ಋಗ್ವೇದ, ೧೦. ೪೫-೪೪; ೮.೭೪) ನಂತರದ ಅವತಾರಗಳ ಬಗ್ಗೆಯೂ ವೇದ ಸಾಹಿತ್ಯದಲ್ಲಿ ಋಷಿಗಳು, ದೇವತೆಗಳು ಎಂಬ ಉಲ್ಲೇಖಗಳಿವೆ.

ಶ್ರೀರಾಮಕೃಷ್ಣರ ಹದಿನಾರು ಮಂದಿ ಸಂನ್ಯಾಸಿ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಾರದಾನಂದರು ಹೇಳುತ್ತಾರೆ: ''ಅವತಾರದ ಕಲ್ಪನೆಯ ಮೂಲ ವೇದ ಮತ್ತು ಉಪನಿಷತ್ತುಗಳಲ್ಲಿ ಇದೆ. ಅವತಾರ ಎಂದರೆ ಪರಮಾತ್ಮನು ಅವತರಿಸುವುದು. ವೇದ ಕಾಲದ ಆರಂಭ ದಲ್ಲಿ ಧರ್ಮಸ್ಥಾಪನೆ ಮಾಡುವ ಗುರುಗಳನ್ನು 'ಋಷಿಗಳು' ಎಂದು ಕರೆಯುತ್ತಿದ್ದರು. ಅವರು ಆಧ್ಯಾತ್ಮಿಕ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದರು. ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಿದ್ದರು. ಈ ಮಾತು ವೇದಕಾಲದ ಋಷಿಗಳಿಂದ ಹಿಡಿದು ಪುರಾಣದ ಕಾಲದವರೆಗಿನ ಅವತಾರಗಳವರೆಗೆ ಎಲ್ಲ ಮಹಾ ವ್ಯಕ್ತಿಗಳಿಗೂ ಅನ್ವಯವಾಗುತ್ತದೆ.'' *('Sri Ramakrishna and His Divine Play,' Vedanta Society of St. Louis, 2003.)* ವೇದ ಸಾಹಿತ್ಯ ದಲ್ಲಿ ವಿಧಿಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರೆ ಪುರಾಣಗಳಲ್ಲಿ ಭಕ್ತಿಗೆ, ಕವಿತ್ವಕ್ಕೆ, ಅತೀಂದ್ರಿಯತ್ವಕ್ಕೆ ಹೆಚ್ಚು ಗಮನ ಕೊಡಲಾಗಿದೆ. ಮಾನವನಿಗೆ ತನ್ನ ಪ್ರೀತಿಯನ್ನು ತೋಡಿಕೊಳ್ಳಲು ಏನೋ ಒಂದು ಮೂರ್ತವಾದುದು ಬೇಕು. ಈ ಅಂಶವನ್ನು ಬಳಸಿಕೊಂಡು ವೇದಾಂತದ ತಾತ್ತ್ವಿಕ ಮತ್ತು ಆಧ್ಯಾತ್ಮಿಕ ಸತ್ಯಗಳನ್ನು ಸಾಮಾನ್ಯರೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಸುಲಭವಾಗಿ ತಿಳಿಸಲು ಪುರಾಣಗಳು ಪ್ರಯತ್ನಿಸುತ್ತವೆ.

ಪುರಾಣಗಳ ಕಾಲದಲ್ಲಿ ಅವತಾರದ ಕಲ್ಪನೆ ಒಂದು ನಿಶ್ಚಿತ ರೂಪವನ್ನು ಪಡೆದುಕೊಂಡಿತು. ಭಗವಂತನಿಗೆ ವಿವಿಧ ಆಕಾರಗಳನ್ನು ನೀಡಿದರು. ವೈಷ್ಣವ, ಶಾಕ್ತ, ಶೈವ ಇತ್ಯಾದಿ ಹಿಂದೂ ಧರ್ಮದ ಪ್ರಮುಖ ಪಂಥಗಳೆಲ್ಲವೂ ಅವತಾರದ ಸಿದ್ಧಾಂತವನ್ನು ಒಪ್ಪಿಕೊಂಡಿವೆ.

ವೈಷ್ಣವ ಸಿದ್ಧಾಂತ ಮತ್ತು ಅದರ ಎರಡು ಪ್ರಾಚೀನ ಸಂಪ್ರದಾಯಗಳಾದ ಪಂಚರಾತ್ರ ಮತ್ತು ಭಾಗವತಗಳಲ್ಲಿ ಅವ ತಾರದ ಬಗ್ಗೆ ವಿಸ್ತಾರವಾಗಿ ಹೇಳಲಾಗಿದೆ.

ಪಂಚರಾತ್ರ ಸಂಪ್ರದಾಯದ ಪ್ರಕಾರ ಐದು ಬಗೆಯ ಅವತಾರಗಳಿವೆ: (೧) ಪರಾ (೨) ವ್ಯೂಹ (೩) ವಿಭವ (೪) ಅಂತರ್ಯಾಮಿ ಮತ್ತು (೫) ಅರ್ಚ

ಭಾಗವತ ಹಲವಾರು ಬಗೆಯ ಅವತಾರಗಳ ಬಗ್ಗೆ ಹೇಳುತ್ತದೆ. ಅವುಗಳನ್ನು ಹೀಗೆ ವರ್ಗೀಕರಿಸಬಹುದು:

1) ಪ್ರಕಟನೆಯ ಆಧಾರದ ಮೇಲೆ:

ಪೂರ್ಣಾವತಾರ (೨) ಗುಣಾವತಾರ (೩) ವ್ಯೂಹಾವತಾರ (೪) ಮನ್ವಂತರಾವತಾರ (೫) ಯುಗಾವತಾರ (೬) ಲೀಲಾವತಾರ.

2) ದಿವ್ಯತೆಯ ಪ್ರಕಾಶದ ಮಟ್ಟದ ಆಧಾರದ ಮೇಲೆ ಅವತಾರದ ವರ್ಗೀಕರಣ:

೧) ಅಂಶಾವತಾರ (೨) ಕಾಲಾವತಾರ (೩) ಅಂಶ- ಕಾಲಾವತಾರ (೪) ಆವೇಶಾವತಾರ ಮತ್ತು (೫) ಪೂರ್ಣಾವತಾರ

## ಪರಬ್ರಹ್ಮ ಅಥವಾ ಭಗವಂತ ಹೇಗೆ ಅವತರಿಸುತ್ತಾನೆ?

ಈ ಪ್ರಶ್ನೆಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೀಗೆ ಉತ್ತರಿಸಿದ್ದಾನೆ: ''ಭಗವಂತನಿಗೆ ಜನನ-ಮರಣಗಳಿಲ್ಲ. ಅವನು ಸಕಲ

ಚರಾಚರಗಳ ಒಡೆಯನು. ಎಲ್ಲದರ ಸಾರವೇ ಅವನು. ಸಕಲ ಜೀವಿಗಳಿಗೂ ಆಧಾರವೇ ಅವನು. ಎಲ್ಲವೂ ಅವನಲ್ಲೇ ನೆಲೆಸಿವೆ. ತಾನೇ ಸೃಜಿಸಿದ ಪ್ರಕೃತಿ ಅಥವಾ ಮಾಯೆಯನ್ನು ಆಶ್ರಯಿಸಿ ಅವನು ಜನ್ಮ ತಳೆಯುತ್ತಾನೆ.''

ಶ್ರೀರಾಮಕೃಷ್ಣರೂ ಇದನ್ನು ದೃಢಪಡಿಸುತ್ತಾರೆ: ''...ಆ ಪರಬ್ರಹ್ಮವೇ ಮಾನವನ ರೂಪ ತಳೆದುಬರುತ್ತದೆ. ಇದು ಹೇಗೆ ಗೊತ್ತೆ? ವಿಶಾಲವಾದ ಮೇಲ್ಛಾವಣಿಯಿಂದ ನೀರು ಒಂದು ಕೊಳವೆಯ ಮೂಲಕ ರಭಸದಿಂದ ಹರಿಯುತ್ತದಲ್ಲ, ಹಾಗೆ. ಆದ್ಯಾಶಕ್ತಿಯ ಸಹಾಯದಿಂದ ಭಗವಂತ ಅವತಾರ ತಳೆಯುತ್ತಾನೆ. ಅವನ ಶಕ್ತಿಯೇ ಮಾನವ ಆಕಾರವನ್ನು ತಳೆಯುತ್ತದೆ.'' ಸಾಮಾನ್ಯ ಜೀವಿಗಳಿಗೂ ಅವತಾರ ಪುರುಷರಿಗೂ ಇರುವ ಮುಖ್ಯ ವ್ಯತ್ಯಾಸ ಇದೇ. ಅವತಾರ ಪುರುಷ ತನ್ನ ಇಚ್ಛೆಯಿಂದ ಈ ಜಗತ್ತಿಗೆ ಬರುತ್ತಾನೆ. ಸಾಮಾನ್ಯ ಜೀವಿಗಳಾದರೋ ಮಾಯೆಯ ಬಂಧನಕ್ಕೆ ಸಿಲುಕಿ ಪೂರ್ವಜನ್ಮದ ಕರ್ಮದ ಫಲದಿಂದ ಜನ್ಮ ತಳೆಯಲೇಬೇಕಾಗುತ್ತದೆ. ಕೃಷ್ಣ ಆಂತರ್ಯದಲ್ಲಿ ಅವತಾರ, ಆದರೆ ಹೊರನೋಟಕ್ಕೆ ಸಾಮಾನ್ಯ ಮಾನವನಂತೆ ವ್ಯವಹರಿಸುತ್ತಿದ್ದ. ಭಗವಂತ ತನ್ನದೇ ಅನಂತ ಗುಣಗಳ ಮೂಲಕ ಆಕಾರ ತಳೆಯುತ್ತಾನೆ. ಗೀತೆಯ ಪ್ರಕಾರ ಅವತಾರ ಎಂದರೆ, ದೇವ-ಮಾನವ.

### ಅವತಾರಗಳ ಉದ್ದೇಶ

ಅವತಾರಗಳ ಕಾಲದ ಬಗ್ಗೆ ಗೀತೆ ಹೇಳುತ್ತದೆ. ಅರಿಯಲಸದಳವಾದ ಮಾಯೆಯ ಬಲೆಗೆ ಸಿಕ್ಕಿ ಮನುಷ್ಯರು ಈ ಜಗತ್ತನ್ನು ಮತ್ತು ಇಂದ್ರಿಯ ಸುಖಗಳನ್ನು ನಂಬಿ ಮೋಸ ಹೋಗುತ್ತಾರೆ; ತಮ್ಮ ನಿಜ ಸ್ವರೂಪವನ್ನು ಮರೆತು ಅಧರ್ಮದ ಹಾದಿಯಲ್ಲಿ ನಡೆಯುತ್ತ ಕೆಟ್ಟ ಕೃತ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಅಮೂಲ್ಯವಾದ ತಮ್ಮ ಜೀವನವನ್ನು ನಷ್ಟಮಾಡಿಕೊಳ್ಳುತ್ತಾರೆ.

ಇದು ನಮ್ಮನ್ನು ಮುಂದಿನ ಪ್ರಶ್ನೆಗೆ ಒಯ್ಯುತ್ತದೆ: ಅವತಾರದ ಮೂಲ ಉದ್ದೇಶವೇನು? ಮೊದಲೇ ಹೇಳಿದಂತೆ, ಧರ್ಮವನ್ನು ಸ್ಥಿರಗೊಳಿಸುವುದೇ ಅವತಾರಗಳ ಮೂಲ ಉದ್ದೇಶವಲ್ಲ. ಜನರನ್ನು ಮತ್ತೆ ಧರ್ಮದ ಅಥವಾ ಸಚ್ಚಾರಿತ್ರ್ಯದ ಹಾದಿಗೆ ತರುವುದು ಮತ್ತು ಆ ಮೂಲಕ ಅವರನ್ನು ದೈವತ್ವಕ್ಕೆ ಏರಿಸುವುದು.

ಭಗವಾನ್ ಶ್ರೀರಾಮಕೃಷ್ಣರು ಅವತಾರದ ಉದ್ದೇಶವನ್ನು ಹೀಗೆ ವಿವರಿಸುತ್ತಾರೆ: ''ಭಗವಂತ ತಾನೇ ಮಾನವ ರೂಪ ಧರಿಸಿ ಜನರಿಗೆ ಭಕ್ತಿಯ ಮಾರ್ಗಗಳ ಬಗ್ಗೆ ಬೋಧಿಸುತ್ತಾನೆ. ಭಗವಂತ ಹೀಗೆ ಮಾನವರೂಪಿಯಾಗಿ ಬರುವುದೇಕೆ ಗೊತ್ತೆ? ಏಕೆಂದರೆ ಮಾನವ ಶರೀರದ ಮೂಲಕ ಅವನು ಭಗವಂತನ ಕುರಿತಾದ ಮಾತುಗಳನ್ನು ಆಲಿಸುತ್ತಾನೆ, ಭಗವಂತನೊಡನೆ ಆನಂದಿಸುತ್ತಾನೆ, ದಿವ್ಯಾನಂದವನ್ನು ಅನುಭವಿಸುತ್ತಾನೆ. ಜನರಿಗೆ ಆಧ್ಯಾತ್ಮಿಕ ಜೀವನದ ಬಗ್ಗೆ ತಿಳಿಸಲು ಅವತಾರ, ಈ ಜಗತ್ತಿನಲ್ಲಿ ಭಕ್ತರ ಸಂಗದಲ್ಲಿ ಇರುತ್ತಾನೆ. ಭಗವತ್ಪ್ರೇಮದ ಭಾವವನ್ನು ಇಟ್ಟುಕೊಂಡಿರುತ್ತಾನೆ.''

ಪ್ರತಿ ಬಾರಿಯೂ ಅವತಾರಿಯು ಯಾವುದೋ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಜಗತ್ತಿಗೆ ಬರುತ್ತಾನೆ. ಅವನಿಂದ ಬಹಳಷ್ಟು ಜನರು ಪ್ರಭಾವಿತರಾಗುತ್ತಾರೆ. ಅವತಾರಿಗೆ ಬಾಲ್ಯದಲ್ಲೇ ತನ್ನ ದಿವ್ಯ ಸ್ವರೂಪದ ಬಗ್ಗೆ ಅರಿವಿರುತ್ತದೆ. ಅವನು ತನ್ನ ಮುಕ್ತಿಗಾಗಿ ಅಲ್ಲ, ಜಗದ ಮುಕ್ತಿಗಾಗಿ ಶ್ರಮಿಸುತ್ತಾನೆ. ಅವನಲ್ಲಿ ವಿಶೇಷವಾದ ಶಕ್ತಿಗಳಿರುತ್ತವೆ. ಶ್ರೇಷ್ಠವಾದ ಭಕ್ತಿ ಮತ್ತು ಜ್ಞಾನಗಳೆರಡೂ ಸಮಪ್ರಮಾಣದಲ್ಲಿ ಬೆರೆತಿರುತ್ತವೆ. ಇಷ್ಟೆಲ್ಲ ವಿಶೇಷಗಳಿದ್ದರೂ ಸಾಮಾನ್ಯ ಜನರು ಅವತಾರ ಪುರುಷನನ್ನು ಗುರುತಿಸುವುದಿಲ್ಲ , ಏಕೆ? ಶ್ರೀಕೃಷ್ಣ ಹೇಳುತ್ತಾನೆ: ''ಇದಕ್ಕೆ ಕಾರಣ ಜನರಲ್ಲಿರುವ ಮೂಢತ್ವ. ಪರಮಾತ್ಮನೇ ಮಾನವ ಶರೀರದಲ್ಲಿ ಪ್ರಕಟವಾಗಿದ್ದಾನೆ ಎಂಬುದನ್ನು ಮೂಢರು ಅರಿಯರು.'' ಶ್ರೀರಾಮಕೃಷ್ಣರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: ''ಭಗವಂತನೇ ಮಾನವನಾಗಿ ಅವತರಿಸುತ್ತಾನೆ, ಮಾನವನಂತೆಯೇ ವರ್ತಿಸುತ್ತಾನೆ. ಎಲ್ಲ ಮಾನವರಂತೆ ಅವನಿಗೂ ಹಸಿವು, ನೀರಡಿಕೆ, ಕಾಯಿಲೆ, ದುಃಖ, ಕೆಲವೊಮ್ಮೆ ಭಯ ಎಲ್ಲವೂ ಉಂಟಾಗುತ್ತವೆ. ಹೀಗಿದ್ದಾಗ ಅವನನ್ನು ಅವತಾರ ಎಂದು ನಂಬುವುದು ಬಹಳ ಕಷ್ಟ. ಉದಾಹರಣೆಗೆ ರಾಮ, ಸೀತೆಗಾಗಿ ಹೇಗೆಲ್ಲ ಪ್ರಲಾಪಿಸಿದ.''

ಗೀತೆಗೆ ಭಾಷ್ಯ ಬರೆಯುತ್ತ ಶಂಕರಾಚಾರ್ಯರು ಅವತಾರದ ಉದ್ದೇಶದ ಬಗ್ಗೆ ಚರ್ಚಿಸುತ್ತಾರೆ. ಶ್ರೀಕೃಷ್ಣನ ಅವತಾರದ ಬಗ್ಗೆ ಹೇಳುತ್ತ: ''ನಾರಾಯಣನೆಂದು ಕರೆಯಲ್ಪಡುವ ಮೂಲ ಸೃಷ್ಟಿಕರ್ತನಾದ ವಿಷ್ಣುವು ವಿಶ್ವದಲ್ಲಿ ಸುವ್ಯವಸ್ಥೆ ನೆಲೆಸುವಂತೆ ಮಾಡಲು ತಾನೇ ವಸುದೇವ ಮತ್ತು ದೇವಕಿಯರ ಮಗನಾದ ಕೃಷ್ಣನಾಗಿ ಜನಿಸಿದ. ಶ್ರೀಕೃಷ್ಣ, ಅನಂತ ಜ್ಞಾನದ ಒಡೆಯನೂ, ಆತ್ಮಸಂಯಮಿಯೂ, ನೈತಿಕ-ಆಧ್ಯಾತ್ಮಿಕ-ಮಾನಸಿಕ- ಬೌದ್ಧಿಕ-ಭೌತಿಕ ಶಕ್ತಿಗಳ ಗಣಿಯೂ ಆಗಿದ್ದಾನೆ. ಪ್ರಕೃತಿ ಅಥವಾ ಮಾಯೆಯು ಅವನ ನಿಯಂತ್ರಣದಲ್ಲಿದೆ. ಸತ್ವ, ರಜಸ್ಸು, ಮತ್ತು ತಮಸ್ಸು ಈ ಮೂರು ಗುಣಗಳಿಂದ ನಿಯಂತ್ರಿತವಾದ ಜಗತ್ತು, ಕೃಷ್ಣ ಜನಿಸಿದ ಎಂದು ಭಾವಿಸುತ್ತದೆ. ('ದೇಹವಾನಪಿ, ಲೋಕಾನುಗ್ರಹಂ ಕುರ್ವನ್ನಪಿ') ಅವನಿಗೆ ಜನನವೂ ಇಲ್ಲ ಮರಣವೂ ಇಲ್ಲ. ಅವನಿಗೆ ಯಾವುದೇ ಸ್ವಹಿತಾಸಕ್ತಿ ಇಲ್ಲ. ಸಕಲ ಜೀವಿಗಳಿಗೂ ನೆರವಾಗುವುದೇ ಅವನ ಏಕೈಕ ಉದ್ದೇಶ. ಅರ್ಜುನನು ದುಃಖ ಮತ್ತು ಭ್ರಮೆಗಳ ಸಾಗರದಲ್ಲಿ ಮುಳುಗಿದ್ದಾಗ ಕೃಷ್ಣ ಅವನಿಗೆ ವೇದ ಧರ್ಮದ ನಿಜವಾದ ಅರ್ಥಗಳನ್ನು ಮನದಟ್ಟು ಮಾಡಿಸಿದ.''

ಹೀಗೆ, ಶಂಕರರ ಪ್ರಕಾರ ಸ್ವಯಂ ಭಗವಂತನೇ ತನ್ನ ಮಾಯೆಯನ್ನು ಆಶ್ರಯಿಸಿ ಅವತರಿಸಿ ಬಂದು ಲೋಕಕಲ್ಯಾಣವನ್ನು ಮಾಡುತ್ತಾನೆ. ಅವತಾರ ಯಾವುದೇ ಕೆಲಸ ಮಾಡುವ ಅಗತ್ಯ

ವಿಲ್ಲ. ಅವನ ಇಡೀ ಜೀವನ, ಪ್ರೇಮ ಮತ್ತು ಆನಂದಗಳ ಅಭಿವ್ಯಕ್ತಿಯಾಗಿರುತ್ತದೆ. ಅವನಿಗೆ ಯಾವುದೇ ಕರ್ಮಗಳಿಲ್ಲ, ಕರ್ತವ್ಯಗಳಿಲ್ಲ ಮತ್ತು ಯಾವುದೇ ಕರ್ಮದ ಫಲಾಫಲಗಳು ಅವನಿಗೆ ಅಂಟುವುದಿಲ್ಲ. ಆದರೆ ಮಾಯೆಯ ಆವರಣದೊಳಗೆ ಇರುವವರಿಗೆ ಅದು ಕರ್ಮಗಳಂತೆ ತೋರುತ್ತವೆ. ಅವನಿಗೆ ಶರೀರ ಮತ್ತು ಮನಸ್ಸುಗಳೂ ಇರುವುದಿಲ್ಲ. ಅವನು ಶುದ್ಧ ಆತ್ಮ. ಆದರೆ ಇತರರಿಗೆ ಅವನಿಗೂ ಶರೀರ ಮತ್ತು ಮನಸ್ಸುಗಳು ಇರುವಂತೆ ತೋರುತ್ತದೆ. ಅವತಾರವನ್ನು ವಿವರಿಸುವಾಗ ಶಂಕರರು ಮಾನವೀಯ, ಪೌರಾಣಿಕ ಹಾಗೂ ತಾತ್ತ್ವಿಕ, ಈ ಮೂರು ಅಂಶಗಳನ್ನೂ ಪರಿಗಣಿಸುತ್ತಾರೆ. ಅವರಿಗೆ ಸರ್ವವೂ ಭಗವಂತನೇ. ಅವತಾರ ಆ ಭಗವಂತನ ಒಂದು ಅಂಶವಷ್ಟೇ.

ಆದರೆ ಮಧ್ವರ ಪ್ರಕಾರ ಭಗವಂತ ಯಾವುದೇ ಆಕಾರವನ್ನು ಹೊಂದುವುದೇ ಇಲ್ಲ. ಅವನ ಶರೀರವೆಂಬುದು ಒಂದು ತೋರಿಕೆ ಮಾತ್ರ. ಈ ತೋರಿಕೆಗೆ ಯಾವುದೇ ಅನಿವಾರ್ಯತೆ ಕಾರಣವಲ್ಲ. ಆನಂದಮಯನಾದ ಅವನು ಬದ್ಧರ ಮೇಲೆ ಕರುಣೆ ಹೊಂದಿದವನಾಗಿ ಸ್ವ-ಇಚ್ಛೆಯಿಂದ ಹಾಗೆ ತೋರುತ್ತಾನೆ. ಭಗವದ್ಗೀತೆ ಹೀಗೆ ಹೇಳುತ್ತದೆ: **ಅಜಾತ ಏವ ಗಾತ ಇವ ಪ್ರತೀಯತೇ ಏವಾ ನ ಜನ್ಮನೈವ ಪರಿತ್ರಾಣಾದಿ ಕಾರ್ಯಮಿತಿ ನಿಯಮಃ ! ತಥಾಪಿ ಲೀಲಾಯಾ ಸ್ವಭಾವೇತ್ ಚ ಯಥೇಷ್ಟಚಾರೀ !!** *(೪.೬)* ಇದು ಹೆಚ್ಚು ಕಡಿಮೆ ಶಂಕರರ ಅಭಿಪ್ರಾಯದಂತೆಯೇ ಇದೆ. ಆದರೆ ಇಲ್ಲಿ ಭಗವಂತನ ಅವತಾರ ಒಂದು ನಿಗೂಢ. ಭಗವಂತನು ಯಾವುದರಿಂದಲೂ ಬದ್ಧನಾಗಿಲ್ಲ, ಬದ್ಧನಾಗುವುದೂ ಇಲ್ಲ. ಅವನು ತನ್ನ ಸ್ವ-ಇಚ್ಛೆ ಮತ್ತು ಸ್ವ-ಸಂತೋಷದಿಂದ ಅವತಾರವಾಗಿ ತೋರುತ್ತಾನೆ. ಈ ಜಗತ್ತಿನ ಸೃಷ್ಟಿ ಎಂತು ಅವನ ಲೀಲೆಯೋ ಅಂತೆಯೇ ಅವತಾರವೂ ಅವನ ಲೀಲೆಯೇ. ಹೆಚ್ಚೆಂದರೆ ಇದನ್ನು ಅವನ ಕೃಪೆ ಎಂದು ಬಣ್ಣಿಸಬಹುದು. ಆದರೆ ಅವನ ಈ ನಿಗೂಢ ನಡೆಗಳನ್ನು ಪ್ರಶ್ನಿಸುವಂತಿಲ್ಲ. ಶಂಕರರಿಗೆ ಅವತಾರ ಒಂದು ನಿಗೂಢವಲ್ಲ. ಜಗತ್ತಿನಲ್ಲಿರುವ ಯಾವುದೇ ಜೀವಿ ಅಥವಾ ವಸ್ತುವಿನಂತೆ ಭಗವಂತನೂ ಜಗತ್ತಿಗೆ ಬರುತ್ತಾನೆ. ಅವತಾರದ ತತ್ತ್ವ ತರ್ಕಬದ್ಧವಾಗಿದೆ.

ಶಂಕರ ಮತ್ತು ಮಧ್ವರಿಗಿಂತ ರಾಮಾನುಜರ ಚಿಂತನೆಗಳು ಭಿನ್ನವಾಗಿವೆ. ಅವರ ಪ್ರಕಾರ ಭಗವಂತ ಎಲ್ಲ ಜೀವಿಗಳಂತೆಯೇ ಜನ್ಮ ತಳೆಯುತ್ತಾನೆ. ಆದರೆ ತನ್ನ ಎಲ್ಲ ವಿಶೇಷತೆಗಳೊಂದಿಗೇ ಜನ್ಮತಳೆಯುತ್ತಾನೆ. ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದ ಐದನೆಯ ಶ್ಲೋಕವು ಹೇಳುತ್ತದೆ :

**ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।**
**ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥**

'ಅರ್ಜುನಾ, ನಮ್ಮಿಬ್ಬರಿಗೂ ಅದೆಷ್ಟೋ ಜನ್ಮಗಳು ಕಳೆದು ಹೋಗಿವೆ. ನನಗೆ ಅವುಗಳೆಲ್ಲವೂ ತಿಳಿದಿದೆ ಆದರೆ ನಿನಗೆ ತಿಳಿಯದು.' ಅದೇ ಅಧ್ಯಾಯದ ಆರನೆಯ ಶ್ಲೋಕವು ಹೇಳುತ್ತದೆ:

**ಅಜೋऽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋऽಪಿ ಸನ್ ।**
**ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ॥**

'ಹುಟ್ಟುಸಾವುಗಳಿಲ್ಲದ ಸಮಸ್ತ ಭೂತಗಳಿಗೂ ಒಡೆಯನಾದ ನಾನು ನನ್ನ ಪ್ರಕೃತಿಯನ್ನು ವಶಪಡಿಸಿಕೊಂಡು ನನ್ನ ಮಾಯಾ ವಿಲಾಸದಿಂದ ಜನಿಸುತ್ತೇನೆ.' **(ಆತ್ಮಮಾಯಯಾ ಆತ್ಮೀ ಯಯಾ ಮಾಯಯಾ ।.. ಆತ್ಮೀಯೇನ ಜ್ಞಾನೇನ ಆತ್ಮಸಂಕಲ್ಪೇನ ಇತ್ಯರ್ಥಃ । ಅತಃ ಅಪಹತಪಾಪ್ಮತ್ವಾದಿ ಸಮಸ್ತ ಕಲ್ಯಾಣಗುಣಾತ್ಮಕತ್ವಂ ಸರ್ವಮೈಶ್ವರಂ ಸ್ವಭಾವಂ ಅಜಹದ್ ಏವ ಸ್ವಂ ಏವ ರೂಪಂ ದೇವ ಮನುಷ್ಯಾದಿಸಜಾತೀಯಸಂಸ್ಥಾನಂ ಕುರ್ವನ್ ಆತ್ಮಸಂಕಲ್ಪೇನ ದೇವಾದಿರೂಪಃ ಸಂಭವಾಮಿ । ತದ್ ಇದಂ ಆಹ - ಅಜಾಯಮಾನೋ ಬಹುಧಾ ವಿಜಾಯತೇ ಇತಿ ಶ್ರುತಿಃ)** ಶ್ರುತಿಯು ಹೇಳುತ್ತದೆ, ಹುಟ್ಟಿಲ್ಲದಿದ್ದರೂ ಅವನು ಅನೇಕ ರೂಪಗಳನ್ನು ಧರಿಸಿ ಹುಟ್ಟುತ್ತಾನೆ. ಇದರ ಆಧಾರದ ಮೇಲೆ ರಾಮಾನುಜರು ಅಭಿಪ್ರಾಯಪಡುತ್ತಾರೆ, ಭಗವಂತನು ತನ್ನ ಎಲ್ಲ ಮಹಿಮೆಗಳ ಸಹಿತವಾಗಿ ಜನಿಸುತ್ತಾನೆ. ಈ ವಿವಿಧ ರೂಪುಗಳನ್ನು ಶ್ರೀವೈಷ್ಣವರು ಹೀಗೆ ವರ್ಗೀಕರಿಸುತ್ತಾರೆ: ಪರಾ, ವ್ಯೂಹ, ವಿಭವ, ಹಾರ್ದ ಮತ್ತು ಅರ್ಚಾ.

'**ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಃ ಪರಸ್ತಾತ್।**' 'ತಮಸ್ಸಿನ ಆಚೆ ಸೂರ್ಯನಂತೆ ಹೊಳೆಯುತ್ತಿರುವ ವಿಭುವನ್ನು ನಾನು ಅರಿತಿರುವೆನು' ಎನ್ನುವಾಗ ಆ ಪರರೂಪದ ಬಗ್ಗೆಯೇ ಹೇಳುತ್ತಿರುವುದು. ಶ್ವೇತಾಶ್ವತರ ಉಪನಿಷತ್ತು ಹಾಗೂ ನಾರಾಯಣ ಉಪನಿಷತ್ತುಗಳು ಹೇಳುವಂತಹ ಅತ್ಯುನ್ನತ ಅಭಿವ್ಯಕ್ತಿ ಇದೇ. ಇದಕ್ಕೆ ಸರಿಸಮನಾದ ಅದ್ವೈತದ ಕಲ್ಪನೆ ಎಂದರೆ ಸಗುಣ ಬ್ರಹ್ಮ. ಇದನ್ನೇ ಕೆಲವೊಮ್ಮೆ ವಾಸುದೇವ ಎಂದೂ ಕರೆಯುತ್ತಾರೆ. ಇದು ಶುದ್ಧ ವಸ್ತುವಿನಿಂದ ಆಗಿದೆ ಎಂದು ತಿಳಿಯಲಾಗಿದೆ.

ವ್ಯೂಹ ಎಂದರೆ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಮತ್ತು ಅನಿರುದ್ಧ. ಇವುಗಳಲ್ಲಿ ವಾಸುದೇವನಲ್ಲಿ ಜ್ಞಾನ, ಐಶ್ವರ್ಯ, ಇತ್ಯಾದಿ ಭಗವಂತನ ಎಲ್ಲ ಆರು ಗುಣಗಳೂ ಇವೆಯಾದರೂ ಸಂಕರ್ಷಣದಲ್ಲಿ ಜ್ಞಾನ ಮತ್ತು ಬಲ; ಪ್ರದ್ಯುಮ್ನದಲ್ಲಿ ಐಶ್ವರ್ಯ ಮತ್ತು ವೀರ್ಯ; ಮತ್ತು ಅನಿರುದ್ಧದಲ್ಲಿ ಶಕ್ತಿ ಮತ್ತು ತೇಜಸ್ಸು ವಿಶೇಷವಾಗಿ ಪ್ರಕಟವಾಗಿರುತ್ತವೆ. ಇವುಗಳ ಕಾರ್ಯಗಳು ಅನುಕ್ರಮವಾಗಿ ವಿಶ್ವದ ಲಯ, ಸೃಷ್ಟಿ ಮತ್ತು ಸ್ಥಿತಿ. ಈ ದೃಷ್ಟಿಗೆ ಆಧಾರ ಪಂಚರಾತ್ರ ಆಗಮ.

### ಕೊನೆಯದಾಗಿ

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ನಾವು ಮಾನವರಾಗಿರುವವರೆಗೂ ದೇವರನ್ನು ಮಾನವನಂತಲ್ಲದೆ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ನಾವು ಮಾನವರೂಪಿ ಭಗವಂತನನ್ನು ಪೂಜಿಸುವುದು ಅನಿವಾರ್ಯ. ಎಲ್ಲಿಯವರೆಗೆ ಮಾನ

ವನು ಸುಖ-ದುಃಖ, ಬೇಕು-ಬೇಡ, ಜನನ-ಮರಣ, ಮಿತಿಗಳು-ಬಂಧನ ಇತ್ಯಾದಿಗಳನ್ನು ಅನುಭವಿಸುತ್ತಿರುತ್ತಾನೋ ಅಲ್ಲಿಯವರೆಗೆ ಮಂಡಿಯೂರಿ ಭಗವಂತನನ್ನು ಪ್ರಾರ್ಥಿಸುವುದನ್ನು ಬಿಟ್ಟರೆ ಗತ್ಯಂತರವಿಲ್ಲ. ಕರುಣಾಮಯನಾದ ಭಗವಂತ ಮಾನವರ ಉದ್ಧಾರಕ್ಕಾಗಿ ಮಾನವ ರೂಪವನ್ನು ಧರಿಸಿ ಬರುತ್ತಾನೆ. ಅವತಾರದಿಂದ ನಮಗಾಗುವ ಮತ್ತೊಂದು ಲಾಭವೆಂದರೆ ನಾವು ಭಗವಂತನೊಂದಿಗೆ ಒಡನಾಡಬಹುದು. ಅಂತಹ ದೇವಮಾನವನ ಆಪ್ತ ಶಿಷ್ಯರು ಅವನ ಬಳಿಯೇ ಇದ್ದು ಅವನೊಂದಿಗೆ ಆನಂದದಿಂದ ಸಮಯ ಕಳೆಯುತ್ತಾರೆ ಅವನಿಂದ ಕಲಿಯುತ್ತಾರೆ. ಆದರೆ ಸಾಮಾನ್ಯರಿಗೆ ಇಂತಹ ಸೌಲಭ್ಯ ಸಿಗುವುದೆ? ಅಂತಹ ದೇವಮಾನವನಿಂದ ದೇವರನ್ನು ತಿಳಿಯಬಲ್ಲರೆ? ಅವತಾರ ಸಿದ್ಧಾಂತದಲ್ಲಿನ ಅತ್ಯಂತ ಮುಖ್ಯ ವಿಷಯ ಇದು. ಇಂತಹ ಅವತಾರವನ್ನು ಗಮನಿಸಿದರೆ, ಅವತಾರದ ಜೊತೆಗಿದ್ದರೆ ನಮ್ಮ ಮುಕ್ತಿಗೆ ಬೇಕಾದ ಎಲ್ಲ ಅನುಭವಗಳನ್ನೂ ಪಡೆದುಕೊಳ್ಳಬಹುದು.

ಇಲ್ಲಿಯೇ ಭಾಗವತ ಮತ್ತು ಭಗವದ್ಗೀತೆಯಂತಹ ಧರ್ಮಗ್ರಂಥಗಳು ನಮ್ಮ ನೆರವಿಗೆ ಬರುವುದು. ಭಾಗವತವು ಭಗವಂತನೊಂದಿಗೆ ನಾವು ಬೆಳೆಸಿಕೊಳ್ಳಬಹುದಾದ ವಿವಿಧ ಸಂಬಂಧಗಳ (ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ) ಬಗ್ಗೆ ವಿವರವಾಗಿ ವರ್ಣಿಸುತ್ತದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ, ''ಅವನ ಕೃಪೆ, ಸಾಧನೆ, ಮತ್ತು ದೈವೀ ಸಂಪತ್ತನ್ನು ಬೆಳೆಸಿಕೊಳ್ಳುವುದರಿಂದ ಅವತಾರವನ್ನು ಗುರುತಿಸಬಹುದು.'' ''ಸಕಲ ಪೂಜೆ ಮತ್ತು ತಪಸ್ಸುಗಳ ಗುರಿಯಾದ, ಸಕಲ ಬ್ರಹ್ಮಾಂಡಗಳ ಒಡೆಯನಾದ ಮತ್ತು ಸಕಲ ಜೀವಿಗಳ ಸಖನಾದ ನನ್ನನ್ನು ತಿಳಿಯುವುದರಿಂದ ಮಾನವನು ಚಿರಶಾಂತಿಯನ್ನು ಪಡೆಯುತ್ತಾನೆ. ಯಾರು ನನ್ನ ದಿವ್ಯ ಜನ್ಮವನ್ನು ಮತ್ತು ನನ್ನ ಕರ್ಮಗಳನ್ನು ನಿಜವಾಗಿ ಅರ್ಥಮಾಡಿಕೊಳ್ಳಬಲ್ಲನೋ ಅಂತಹವನಿಗೆ ಪುನರ್ಜನ್ಮವಿರುವುದಿಲ್ಲ. ಅವನು ನನ್ನನ್ನು ಪಡೆಯುತ್ತಾನೆ, ಓ ಅರ್ಜುನ!'' ಶ್ರೀರಾಮಕೃಷ್ಣರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ''ಅವತಾರವನ್ನು ಗುರುತಿಸುವುದು ಎಂದರೆ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದು; ಎರಡೂ ಒಂದೇ'' ಎನ್ನುತ್ತಾರೆ.

ಅವತಾರದಿಂದ ಆಗುವ ಪ್ರಭಾವವೇನು? ಅವತಾರವಾದಾಗ ಜಗತ್ತಿನಲ್ಲಿ ಆಧ್ಯಾತ್ಮಿಕ ಸುನಾಮಿಯೇ ಉಂಟಾಗುತ್ತದೆ. ಜನರು ಆಧ್ಯಾತ್ಮಿಕ ಸತ್ಯಗಳ ಬಗ್ಗೆ ಮರಳಿ ಶ್ರದ್ಧೆ ಹೊಂದುತ್ತಾರೆ, ಧರ್ಮದ ನವಯುಗ ಆರಂಭವಾಗುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ, ''ರೈಲಿನ ಇಂಜಿನ್ ಭಾರ ತುಂಬಿದ ಡಬ್ಬಿಗಳನ್ನೂ ತನ್ನೊಂದಿಗೆ ಎಳೆದೊಯ್ದು ಗಮ್ಯವನ್ನು ತಲುಪುತ್ತದೆ. ಹಾಗೇ ಅವತಾರಿ ಸಂಸಾರದ ಭಾರದಿಂದ ಬಳಲುತ್ತಿರುವ ಅಸಂಖ್ಯ ಜನರನ್ನು ಭಗವಂತನ ಪಾದಪದ್ಮಗಳೆಡೆಗೆ ಒಯ್ದು ಬಿಡುತ್ತಾನೆ.''

## ಶ್ರೀಮಾತೆಯವರ ಉಪದೇಶಗಳು



❋ **ಶಿಷ್ಯ :** ಅಮ್ಮಾ, ಮನಸ್ಸು ಸ್ಥಿರವಾಗಿರುವುದಿಲ್ಲ , ಏಕೆ? ಭಗವಂತನ ಬಗ್ಗೆ ಚಿಂತಿಸತೊಡಗಿದಾಗಲೆಲ್ಲ ಮನಸ್ಸು ನಾನಾ ವಿಷಯಗಳ ಕಡೆಗೆ ಹೋಗುತ್ತದೆ.

**ಶ್ರೀಮಾತೆ :** ಹಣ, ಹೆಂಡತಿ, ಮಕ್ಕಳು ಇಂಥ ವಿಷಯಗಳ ಕಡೆಗೆ ಮನಸ್ಸು ಹೋಗುವುದು ಕೆಟ್ಟದ್ದು. ದಿನದ ಕೆಲಸ ಕಾರ್ಯಗಳ ಕಡೆಗೆ ಮನಸ್ಸು ಹೋಗುವುದು ಸ್ವಾಭಾವಿಕವೇ. ಧ್ಯಾನ ಸಾಧ್ಯವಾಗದಿದ್ದರೆ ಜಪ ಮಾಡಬೇಕು. 'ಜಪಾತ್ ಸಿದ್ಧಿಃ.' ಜಪ ಮಾಡುವುದರಿಂದ ಸಿದ್ಧಿಯಾಗುವುದು. ಧ್ಯಾನವು ಸಾಧ್ಯವಾದರೆ ಒಳ್ಳೆಯದೆ ; ಅದು ಆಗದಿದ್ದರೆ ಮನಸ್ಸನ್ನು ಬಲವಂತ ಮಾಡಬಾರದು.

❋ **ಶಿಷ್ಯ :** ಕಾಶಿಯಲ್ಲಿ ಆಶ್ರಮದಲ್ಲಿದ್ದುಕೊಂಡೇ ಸಾಧನೆ, ಭಜನೆ ಮಾಡಿದರೆ ಒಳ್ಳೆಯದೆ ? ಅಥವಾ ನಿರ್ಜನ ಪ್ರದೇಶದಲ್ಲಿ ಸಾಧನೆಭಜನೆ ಮಾಡುವುದು ಒಳ್ಳೆಯದೆ ?

**ಶ್ರೀಮಾತೆ :** ಋಷಿಕೇಶ ಮೊದಲಾದ ನಿರ್ಜನ ಪ್ರದೇಶಗಳಲ್ಲಿ ಸ್ವಲ್ಪ ಕಾಲ ಸಾಧನೆ, ಭಜನೆ ಮಾಡಿ ಮನಸ್ಸು ಸ್ಥಿರವಾದ ಬಳಿಕ ಅದನ್ನು ಎಲ್ಲೇ ಇಡು, ಅಥವಾ ಎಂಥ ಜನರ ನಡುವೆಯಾದರೂ ನೀನು ಬೆರೆ, ಅದು ಏಕರೂಪವಾಗಿಯೇ ಇರುತ್ತದೆ. ಗಿಡ ಎಳೆಯದಾಗಿದ್ದಾಗ ಅದಕ್ಕೆ ನಾಲ್ಕೂ ಕಡೆ ಬೇಲಿ ಹಾಕಬೇಕು. ಅದೇ ಗಿಡ ದೊಡ್ಡ ಮರವಾದಾಗ ಆಡು, ದನ ಮುಂತಾದುವುಗಳಿಂದಲೂ ಅದಕ್ಕೆ ಏನೂ ಮಾಡಲಾಗದು. ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡುವುದು ಆವಶ್ಯಕ. ಮನಸ್ಸಿನಲ್ಲಿ ಯಾವುದೇ ವಿಷಯ ಏಳುವಾಗ, ಅದನ್ನು ತಿಳಿಯಲು ಮನಸ್ಸು ಮುಂದಾಗುವುದು. ಏಕಾಕಿಯಾಗಿ ಅಳುತ್ತಳುತ್ತ ಭಗವಂತನಲ್ಲಿ ಪ್ರಾರ್ಥನೆ ಮಾಡಬೇಕು. ಅವನು ಮನಸ್ಸಿನ ಎಲ್ಲ ಮಾಲಿನ್ಯವನ್ನೂ ತೊಳೆಯುವನು ಹಾಗೂ ಎಲ್ಲ ದುಃಖಗಳನ್ನೂ ದೂರ ಮಾಡುವನು. ಅವನೇ ಎಲ್ಲ ತಿಳಿವಳಿಕೆಯನ್ನು ನೀಡುವನು.

❋ ನಿನಗೆ ಭಯವೇಕೆ? ಶ್ರೀರಾಮಕೃಷ್ಣರ ಕೆಲಸ ಮಾಡು. ಸಾಧನೆ, ಭಜನೆ ಮಾಡು. ಸಣ್ಣ ಪುಟ್ಟ ಕೆಲಸಗಳಲ್ಲಿ ಮನಸ್ಸನ್ನು ತೊಡಗಿಸಿಕೊಂಡಿದ್ದರೆ ಕ್ಷುಲ್ಲಕ ಆಲೋಚನೆಗಳು ಏಳಲಾರವು. ಸುಮ್ಮನೆ ಕುಳಿತಿದ್ದರೆ ಮನಸ್ಸಿನಲ್ಲಿ ಅನೇಕ ರೀತಿಯ ಆಲೋಚನೆಗಳು ಏಳುತ್ತವೆ.

*'ಶ್ರೀ ಶಾರದಾದೇವಿ ವಚನವೇದ', ಪು.೩೧೮-೧೯*